# ಜೋಧ ಕೋಟೆ



ಜೋಧಪುರ ರಾಜಸ್ಥಾನದ ಸಾಂಸ್ಕೃತಿಕ ರಾಜಧಾನಿ ಎಂದೇ ಪ್ರಸಿದ್ಧ. ಅದನ್ನು ನೀಲಿ ನಗರಿ, ಸೂರ್ಯನಗರಿ ಅಂತಲೂ ಕರೆಯುತ್ತಾರೆ. ಪ್ರವಾಸಿ ಜೋಧಪುರಕ್ಕೆ ಹೋದರೆ ಅಲ್ಲಿನ ಮೆಹ್ರಾನಘಢ ಕೋಟೆ ನೋಡದೆ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. 15ನೇ ಶತಮಾನದಲ್ಲಿ ರಾಜ ಜೋಧ ಈ ಕೋಟೆ ನಿರ್ಮಿಸಿದ್ದೂ ಈಗಲೂ ಸುಭದ್ರವಾಗಿದೆ. ಈ ಕೋಟೆಯ ಮೇಲೆ ಸುಂದರವಾದ ಅರಮನೆ ಇದೆ. ಇಲ್ಲಿ ಶೂಟಿಂಗ್ ನಡೆಯುತ್ತಿರುತ್ತದೆ. ಕಳೆದ ಡಿಸೆಂಬರ್‌ನಲ್ಲಿ ನಾವು ಭೇಟಿ ಕೊಟ್ಟಾಗ ನಮ್ಮನ್ನು ಆಕರ್ಷಿಸಿದ್ದು ಭಾರಿ ಗಾತ್ರದ ರಾಟೆ. ನೆಲಮಟ್ಟದಿಂದ ಸುಮಾರು 440 ಅಡಿ ಮೇಲಕ್ಕೆ ನೀರೆತ್ತಲು ಉಪಯೋಗಿಸುತ್ತಿದ್ದ ರಾಟೆ ಈಗಲೂ ಚೆನ್ನಾಗಿದೆ.

—ಜಿ.ಬಿ. ಕೃಷ್ಣಪ್ಪ, ಮೈಸೂರು




# ಕಣ್ಮರೆಯಾದ ಕಾಯಿನ್ ಬಾಕ್ಸ್

ಒಂದು ಕಾಲಕ್ಕೆ ಬೀಡಾ ಸ್ಟಾಲ್, ಸ್ಟೇಷನರಿ, ಚಿಕ್ಕ–ಪುಟ್ಟ ಅಂಗಡಿಗಳ ಮುಂದೆ ನೇತಾಡುತ್ತಿದ್ದ ಈ ಕಾಯಿನ್ ಬಾಕ್ಸ್ ಈಗ ಕಣ್ಮರೆಯಾಗಿವೆ. ಮೊಬೈಲ್ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಾಲದಲ್ಲಿ ಮೊಬೈಲ್ ಕರೆ ದರವೂ ಹೆಚ್ಚಾಗಿತ್ತು. ಆಗ ಈ ಕಾಯಿನ್ ಬಾಕ್ಸ್ ಜನಸಾಮಾನ್ಯರ ಸಂಪರ್ಕ ಸಾಧನಗಳಾಗಿದ್ದವು. ಒಂದು ರೂಪಾಯಿ ನಾಣ್ಯ ಹಾಕಿ ಇದರಿಂದ ಮಾತನಾಡಬಹುದಾಗಿತ್ತು. ಶಾಲಾ ಮಕ್ಕಳಿಗಂತೂ ಇವು ತುಂಬಾ ಉಪಯುಕ್ತವಾಗಿದ್ದವು. ನಂತರ ನಡೆದ ಕ್ರಾಂತಿಯಿಂದಾಗಿ ಇವು ಕಣ್ಮರೆಯಾಗಬೇಕಾಯಿತು.

—ಮುರಲೀಧರ ಕುಲಕರ್ಣಿ ಬೀದರ್

# ಮನೆ ಕ್ಷೌರಿಕರು!

ಲಾಕ್‌ಡೌನ್‌ನಿಂದ ಅಂಗಡಿಗಳು ನಿಂತಿವೆ. ಆದರೆ ತಲೆಯ ಕೂದಲು ಬೆಳೆಯುವುದು ನಿಂತಿಲ್ಲ. ಹೊರಗೆ ಹೋಗಿ ಕೂದಲು ಕ್ಷೌರ ಮಾಡಿಸಿಕೊಳ್ಳಲು ಆಗುವುದಿಲ್ಲ. ಸಲೂನುಗಳು ಬಾಗಿಲು ಮುಚ್ಚಿದ್ದರಿಂದ ಹೊಸ ಉದ್ಯೋಗವೊಂದು ಮನೆಯಲ್ಲಿ ತೆರೆದುಕೊಂಡಿದೆ. ಪುರುಷರ ಕೂದಲು ಉದ್ದವಾಗಿ ಬೆಳೆದಿದ್ದರೆ ಮನೆಯಲ್ಲಿ ಹೆಂಗಸರೇ ಕ್ಷೌರ ಮಾಡುತ್ತಿದ್ದಾರೆ.

ಲಾಕ್ ಡೌನ್ ತೆರುವಾದ ನಂತರವೂ ಈ ಮಹಿಳಾ ಮಣಿಗಳು ತಮ್ಮ ಈ ಹೊಸ ಉದ್ಯೋಗದಲ್ಲಿ ಮುಂದುವರಿದರೆ ವೃತ್ತಿನಿರತ ಕ್ಷೌರಿಕರು ದಂಗೆ ಏಳುವದು ಅನಿವಾರ್ಯವಾಗಬಹುದು!

—ಬೀರಣ್ಣ ನಾಯಕ ಮೊಗಟಾ

